ಫ್ಯಾಮಿಲಿ ಇನ್‌ವೆಸ್ಟ್‌ಮೆಂಟನ್ನು ಯಾವ ಯಾವ ಕೆಲಸಗಳಿಗೆ ಸರಾಸರಿ ಎಷ್ಟು ಕೊಟ್ಟಿದ್ದೇವೆಂದು ಇದರಲ್ಲಿ ಇವ್ಯಾಲ್ಯುಯೇಷನ್ ಕೂಡ ಮಾಡಿದ್ದಾರೆ. ನಿಮಗೆ ಹೇಳಬೇಕೆಂದರೆ ನೀರಾವರಿ ಸ್ಕೀಮ್‌ಗಾಗಿ, per capita investment ಪರ್ ಫ್ಯಾಮಿಲಿಗೆ 7574 ಆಗಿದೆ, poultry schemeಗೆ 6753, ಎತ್ತಿನ ಬಂಡಿಗೆ 5764, ಅಂಗಡಿಗೆ 4574, ವೈರಿಗೆ 4175, ಹ್ಯಾಂಡ್‌ಲೂಮ್‌ಗೆ 4043, ಹ್ಯಾಂಡಿಕ್ರಾಫ್ಟ್‌ಗೆ 3588 ಮತ್ತು ಟೈಲರಿಂಗ್‌ಗೆ 3260, ಹೀಗೆ ಮೂರು ಸಾವಿರ, ನಾಲ್ಕು ಸಾವಿರ, ಐದು ಸಾವಿರವೆಂದು ಬೇರೆ ಬೇರೆ ಕೆಲಸಗಳಿಗೆ ಕೊಟ್ಟಿದ್ದೇವೆ. ಆದರೆ ಈಗ ಬೆಲೆ ಜಾಸ್ತಿಯಾಗಿರುವುದರಿಂದ ಈ 5 ಸಾವಿರ, 6 ಸಾವಿರ ಇನ್‌ವೆಸ್ಟ್‌ಮೆಂಟ್ ಏನು ಇದೆ ಅದನ್ನು 12 ಸಾವಿರಕ್ಕಾದರೂ ಜಾಸ್ತಿ ಮಾಡಬೇಕೆಂದು ನಮಗೆ ಅಭಿಪ್ರಾಯವಿದೆ. ಈ ವಿಚಾರವನ್ನು ನಾವು ಕೇಂದ್ರ ಸರ್ಕಾರಕ್ಕೆ ತಿಳಿಸುತ್ತಿದ್ದೇವೆ. ಎಂಟನೇ ಪಂಚವಾರ್ಷಿಕ ಯೋಜನೆಯಲ್ಲಿ ಈ ಫ್ಯಾಮಿಲಿ ಇನ್‌ವೆಸ್ಟ್‌ಮೆಂಟ್ ಏನು ಇದೆ. ಅದು ಜಾಸ್ತಿಯಾಗುತ್ತದೆಂದು ನಾವು ನಂಬಿಕೊಂಡಿದ್ದೇವೆ ಮತ್ತು ಈ field visits, assets verification ಕೆಲಸ ನಡೆಯುತ್ತಿದೆ. ಒಟ್ಟಿನಲ್ಲಿ ಬಡವರಿಗೆ ಅನುಕೂಲವನ್ನು ಮಾಡಿಕೊಡುವ ರೀತಿಯಲ್ಲಿ ಈ ಕಾರ್ಯಕ್ರಮವನ್ನು ಮಾಡಬೇಕು. ಮುಂದುವರೆಸಿಕೊಂಡು ಹೋಗಬೇಕು. ಇದರಲ್ಲಿ ದೋಷವಿಲ್ಲವೆಂದು ನಾನು ಹೇಳುತ್ತಿಲ್ಲ, ಇದರಲ್ಲಿ ನೂರಕ್ಕೆ ನೂರು ಪಾಲು ಯಶಸ್ವಿಯಾಗಿದೆ ಎಂದು ನಾನು ಹೇಳುತ್ತಿಲ್ಲ. ಆದರೆ ಈ ಕಾರ್ಯಕ್ರಮದ ಹಿನ್ನೆಲೆಯಲ್ಲಿರತಕ್ಕ ವಿಚಾರ ಬಹಳ ಮೂಲಭೂತವಾದಂಥದ್ದು, ಇದರ ಗುಣಮಟ್ಟವನ್ನು ಆದಷ್ಟು ಮಟ್ಟಿಗೆ ಹೆಚ್ಚಿಸುತ್ತಾ ಹೋಗುತ್ತೇವೆ.

ಶ್ರೀ ನಾರಾಯಣರಾವ್ ಮನಹಳ್ಳಿ : ಮಾನ್ಯ ಅಧ್ಯಕ್ಷರೇ, ಇದರ ಗುರಿಯನ್ನು ನೀವು ರೀಚ್ ಮಾಡಿಲ್ಲ. ನಮ್ಮ ಬೀದರ್ ಜಿಲ್ಲೆಯ ಏನು ಅಂಕಿಸಂಖ್ಯೆಗಳನ್ನು ಕೊಟ್ಟಿದ್ದೀರಿ ಅದರಲ್ಲಿ 50 ಪರ್‌ಸೆಂಟ್ ಗುರಿಯನ್ನು ಮುಟ್ಟಿದ್ದೇವೆ ಎನ್ನತಕ್ಕ ಮಾತನ್ನು ಹೇಳಿದ್ದೀರಿ, ಪೂರಾ ಗುರಿಯನ್ನು ಮುಟ್ಟಲು ಆಗಿಲ್ಲ. ಕಾರಣವೇನೆಂದರೆ ಅನೇಕ ಬ್ಯಾಂಕುಗಳು ಈ ಕಾರ್ಯಕ್ರಮವನ್ನು ಸರಿಯಾಗಿ ಅನುಷ್ಠಾನಕ್ಕೆ ತರಬಾರದು ಎನ್ನತಕ್ಕ ಉದ್ದೇಶ ಹೊಂದಿವೆ. ಇದು ನನ್ನ ನೇರವಾದ ಆಪಾದನೆ. ಇದಕ್ಕೆ ಮಾನ್ಯ ಸಚಿವರು ಏನು ಹೇಳುತ್ತಾರೆ.

ಶ್ರೀ ಎಂ. ವೈ ಘೋರ್ಪಡೆ : ಮಾನ್ಯ ಅಧ್ಯಕ್ಷರೆ, ಔರಾದ್ ತಾಲ್ಲೂಕಿಗೆ ಸಂಬಂಧಪಟ್ಟಂತೆ ಅಂಕಿಸಂಖ್ಯೆಗಳನ್ನು ಕೊಟ್ಟಿದ್ದೇವೆ. ಬ್ಯಾಂಕಿನವರು ಒಟ್ಟಾರೆಯಾಗಿ ಎಷ್ಟು ಸಾಲವನ್ನು ನೀಡಿದ್ದಾರೆಂದು ಹೇಳಿದ್ದೇವೆ. ರಾಜ್ಯದ ಮಟ್ಟಿಗೆ ಸಬ್ಸಡಿ 2 ಕೋಟಿ ಆದರೆ ಬ್ಯಾಂಕಿನವರು 5 ಕೋಟಿಯನ್ನು ಈ ಕಾರ್ಯಕ್ರಮಕ್ಕೆ ಉಪಯೋಗಿಸಿದ್ದಾರೆ.

ವಿಷಯ : ಚಿತ್ರದುರ್ಗ ಜಿಲ್ಲಾ ಪರಿಷತ್ತಿನ ಕಾನೂನು ಸಲಹೆಗಾರರಿಗೆ ಗೌರವಧನ.

19

ಶ್ರೀ ಎ. ವಿ. ಉಮಾಪತಿ (ಹೊಳಲ್ಕೆರೆ) : ಮಾನ್ಯ ಗ್ರಾಮಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿತ್ರದುರ್ಗ ಜಿಲ್ಲಾ ಪರಿಷತ್ತಿನ ಕಾನೂನು ಸಲಹೆಗಾರರಿಗೆ ನಿಗದಿಪಡಿಸಿರುವುದಕ್ಕಿಂತ ಅಂದರೆ ಮಾಹೆಯಾನ 300-00 ರೂ. ಬದಲಾಗಿ ಮಾಹೆಯಾನ 3,000-00 ನಂತೆ ಗೌರವ ಧನ ಪಾವತಿ ಮಾಡಿದ್ದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಆ) ಅದು ಸರಿಯಲ್ಲವೆಂದೂ ಹೆಚ್ಚುವರಿ ಪಾವತಿ ಮಾಡಿರುವ ಗೌರವಧನವನ್ನು ಸದರಿಯವರಿಂದ ವಾಪಸ್ಸು ಪಡೆಯಬೇಕೆಂದು ಸರ್ಕಾರದಿಂದ ಆದೇಶ ಬಂದಿದ್ದರೂ

ಸಹ ಈವರೆವಿಗೂ ಸದರಿ ಸರ್ಕಾರದ ಆದೇಶವು ಕಾರ್ಯಗತವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಈ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಹಾಗೂ ಈಗಲಾದರೂ ಸದರಿ ಹೆಚ್ಚುವರಿ ಪಾವತಿ ಆಗಿರುವ ಗೌರವಧನವನ್ನು ವಾಪಸ್ಸು ಪಡೆಯಲು ಕ್ರಮ ತೆಗೆದುಕೊಳ್ಳುವುದೇ?

ಈ) ಈ ರೀತಿ ಲಕ್ಷಾಂತರ ರೂಪಾಯಿಗಳು ಅಪವ್ಯಯವಾಗಿದ್ದರೂ ಸಹ ಸರ್ಕಾರವು ಈ ಬಗ್ಗೆ ಮಂದಗತಿ ಅನುಸರಿಸಲು ಕಾರಣಗಳೇನು?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮಾಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು) :

ಅ) ಹೌದು.

ಆ) ಹೌದು.

ಇ) ಸರ್ಕಾರವು ಶೀಘ್ರ ವಸೂಲಾತಿಗೆ ಆದೇಶವನ್ನು ನೀಡಿದೆ.

ಈ) ಜಿಲ್ಲಾ ಪರಿಷತ್ ಮುಟ್ಟುಗೋಲು ಆದೇಶವನ್ನು ಹೊರಡಿಸಿದೆ ಹಾಗೂ ವಸೂಲಾತಿ ಅಧಿಕಾರವನ್ನು ನೇಮಕ ಮಾಡಿದೆ.

ಶ್ರೀ ಎ. ವಿ. ಉಮಾಪತಿ : ಸನ್ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಪರಿಷತ್ತಿನ ಕಾನೂನು ಸಲಹೆಗಾರರಿಗೆ ಕೊಟ್ಟಿರತಕ್ಕ ಗೌರವ ಧನ ಮತ್ತು ಚಿತ್ರದುರ್ಗ ಜಿಲ್ಲೆಯ ಜಿಲ್ಲಾಪರಿಷತ್ತಿನ ಕಾನೂನು ಸಲಹೆಗಾರರಿಗೆ ಎಷ್ಟು ಗೌರವ ಧನವನ್ನು ಕೊಟ್ಟಿದ್ದಾರೆ ಎಂದು ಕೇಳಿದಕ್ಕೆ 300 ರೂಪಾಯಿಗಳ ಬದಲಾಗಿ 3000 ರೂಪಾಯಿಗಳನ್ನು ಕೊಟ್ಟಿದ್ದಾರೆ. ಬಹುಶಃ ಸೊನ್ನೆಗೆ ಬೆಲೆ ಇಲ್ಲವೆಂದಾಗುತ್ತದೆ. ಆದ್ದರಿಂದ ಒಂದು ಹೆಚ್ಚಿಗೆ ಸೊನ್ನೆಯನ್ನು ಸೇರಿಸಿ 300 ರೂ. ಬದಲಾಗಿ 3000 ರೂಪಾಯಿಗಳನ್ನು ಕೊಟ್ಟಿದ್ದಾರೆ. ಸರ್ಕಾರ ಹೆಚ್ಚು ಹಣವನ್ನು ಕೊಟ್ಟಿರುವುದನ್ನು ಒಪ್ಪಿಕೊಂಡಿದೆ. ಈ ರೀತಿ ಹೆಚ್ಚು ಕೊಟ್ಟ ಹಣವನ್ನು ವಾಪಸ್ ಪಡೆಯುವುದಕ್ಕೆ ಏನಾದರೂ ಆದೇಶವನ್ನು ಸರ್ಕಾರ ಹೊರಡಿಸಿದೆಯೇ? ಎಂದು ಕೇಳಿದ್ದಕ್ಕೆ ಹೊರಡಿಸಿದ್ದೇವೆ ಎಂದು ಹೇಳಿದ್ದಾರೆ. ಆದರೆ ಇವತ್ತಿನವರೆಗೆ ಅದನ್ನು ವಸೂಲಿ ಮಾಡಲು ಆಗಿಲ್ಲ, ಎಂದು ಹೇಳಿದ್ದಾರೆ. ಅದರ ಬಗ್ಗೆ ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ ಎಂದು ಮಾನ್ಯ ಸಚಿವರಲ್ಲಿ ಕೇಳುತ್ತೇನೆ.

10.50 ಎ. ಎಂ.

ಶ್ರೀ ಎಂ. ವೈ. ಘೋರ್ಪಡೆ : ಮಾನ್ಯ ಅಧ್ಯಕ್ಷರೇ, ಶ್ರೀ ಬಿ. ಎಸ್. ಚಂದ್ರಶೇಖರ ಮೂರ್ತಿಯವರಿಗೆ ಕಾನೂನಿಗೆ ವಿರುದ್ಧವಾಗಿ ತಿಂಗಳಿಗೆ 3 ಸಾವಿರ ರೂಪಾಯಿಗಳನ್ನು ಕೊಡಬೇಕು ಎಂದು ಜಿಲ್ಲಾ ಅಧ್ಯಕ್ಷರು ಒಂದು ಆದೇಶವನ್ನು 1988ರಲ್ಲಿ ಹೊರಡಿಸಿದ್ದರು. ಅಲ್ಲಿದ್ದಂತಹ ಚೀಫ್ ಸೆಕ್ರೇಟರಿಯವರು ಕೊಡುವುದಿಲ್ಲ ಎಂದು ಹೇಳಿದರು. ಅದಕ್ಕೆ ಅಧ್ಯಕ್ಷರು ನಾನು ಆರ್ಡರ್ ಮಾಡುತ್ತಿದ್ದೇನೆ ಕೊಡಿ ಎಂದು ಹೇಳಿದರು. ಚೀಫ್ ಸೆಕ್ರೇಟರಿ ಅದನ್ನು ತಾತ್ಕಾಲಿಕವಾಗಿ ಕೊಡುತ್ತೇನೆ ಎಂದು ಹೇಳಿದರು. ಇದಕ್ಕೆ ಸರ್ಕಾರದ ಅಪ್ರೂವಲ್ ಪಡೆಯಬೇಕಾಗುತ್ತದೆ ಎಂದೂ ಸಹ ಹೇಳಿದರು. ಕರ್ನಾಟಕ ಲಾ ಆಫೀಶಿಯಲ್ ರೂಲ್ಸ್ 1977 ರಲ್ಲಿ ಅಪ್ಪೆಂ ಆಗುತ್ತದೆ, ಈ ರೀತಿ 3000 ರೂ. ಕೊಟ್ಟದ್ದು ಸರಿಯಲ್ಲ. ಆದ ಕಾರಣ ಮೂರು ಸಾವಿರ ರೂಪಾಯಿಗಳನ್ನು ವಾಪಸ್ಸು ಪಡೆಯುವುದಕ್ಕೆ ಆದೇಶ ಕೊಟ್ಟರು. ಈಗ ಚೀಫ್ ಸೆಕ್ರಟರಿಯವರು ಎಕ್ಸಸ್ ಅಮೌಂಟನ್ನು ವಾಪಸ್ಸು ಪಡೆಯುವುದಕ್ಕೆ ಕ್ರಮ ತೆಗೆದುಕೊಂಡಿದ್ದಾರೆ. ಶ್ರೀ ಬಿ. ಎಸ್. ಚಂದ್ರಶೇಖರ್ ಅವರು ಅವರದೆ ಆದಂತಹ ಬಿಲ್ಲನ್ನು ಕೊಟ್ಟು, ಇಷ್ಟು

ಬರಬೇಕೆಂದು ಲೆಕ್ಕ ಕೊಟ್ಟಿದ್ದಾರೆ. ಚೀಫ್ ಸೆಕ್ರೆಟರಿ ಅದನ್ನು ಲೆಕ್ಕಕ್ಕೆ ತೆಗೆದುಕೊಂಡರೂ ಕೂಡ 75 ಸಾವಿರ ರೂಪಾಯಿಗಳನ್ನು ಅವರ ಕಡೆಯಿಂದ ಪಡೆಯಬೇಕೆಂದು ತೀರ್ಮಾನಕ್ಕೆ ಬಂದಿದ್ದಾರೆ. ರಿಕವರಿ ಪ್ರೊಸೀಡಿಂಗ್ ಮಾಡಿ, ಒಂದು ತಿಂಗಳಲ್ಲಿ ವಸೂಲಿ ಮಾಡುತ್ತೇವೆಂದು ಬರೆದು ಕಳುಹಿಸಿದ್ದಾರೆ. ಇದರ ಮಧ್ಯೆ ಸ್ಟೇ ಆರ್ಡರ್ ಬಂದರೆ ಅದು ಬೇರೆ ವಿಷಯ. ಕೋರ್ಟಿನಿಂದ ಸ್ಟೇ ಆರ್ಡರ್ ಬಂದಿದ್ದರೆ ಆ ಹಣವನ್ನು ಒಂದು ತಿಂಗಳಲ್ಲಿ ರಿಕವರಿ ಮಾಡುತ್ತೇವೆ ಎಂದು ನಮಗೆ ಪತ್ರ ಬರೆದಿದ್ದಾರೆ.

ಶ್ರೀ ಎ. ವಿ. ಉಮಾಪತಿ : ಮಾನ್ಯ ಅಧ್ಯಕ್ಷರೇ, ಎಕ್ಸಸ್ ಅಮೌಂಟ್ 1977ನೇ ಆ್ಯಕ್ಟ್ ಪ್ರಕಾರ ಅವರಿಗೆ 300 ರೂಪಾಯಿಗಳು ಕೊಟ್ಟಿರತಕ್ಕದ್ದು ಎಂದು ತಿಳಿಸಿದ್ದಾರೆ. ಆದರೆ ಅವರು ಕೊಟ್ಟಿರುವುದು 3000 ರೂಪಾಯಿಗಳು. ಇದು ತಪ್ಪು ಎಂದು ಗೊತ್ತಿದ್ದರೂ ಅದನ್ನು ಕೊಟ್ಟಿದ್ದಾರೆ. ಮುಂದೆ ಏನಾದರೂ ತೊಡಕು ಉಂಟಾಗಬಹುದೆಂದು 10 ರೂಪಾಯಿಗಳ ಬಾಂಡ್ ಪೇಪರ್ ಮೇಲೆ ಬರೆಸಿಕೊಂಡಿದ್ದಾರೆ. ಯಾರನ್ನೋ ಸಮಾಧಾನ ಪಡಿಸುವುದಕ್ಕೆ ಲಕ್ಷಾಂತರ ರೂಪಾಯಿಗಳನ್ನು ಕೊಟ್ಟಿದ್ದಾರೆ. ಈಗಾಗಲೇ ಒಂದು ವರ್ಷವಾಯಿತು. ಕೂಡಲೇ ಆದೇಶ ಹೊರಡಿಸಿ ರಿಕವರಿ ಮಾಡಬೇಕು. ಇದಕ್ಕೆ ಸಂಬಂಧಪಟ್ಟಂತೆ ಮುಟ್ಟುಗೋಲು ಆದೇಶ ಹೊರಡಿಸಿದ್ದೀರಾ? ವಸೂಲಾತಿಗೆ ಅಧಿಕಾರಿಗಳನ್ನು ನೇಮಕ ಮಾಡಿದ್ದಾರೆಯೇ? ಯಾವಾಗ ಅವರಿಂದ ವಸೂಲಿ ಮಾಡುತ್ತೀರೆಂದು ಕೇಳುತ್ತೇನೆ.

ಶ್ರೀ ಎಂ. ವೈ. ಘೋರ್ಪಡೆ : ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ 1991ರಲ್ಲಿ ಸಾಕಷ್ಟು ರಿಮೈಂಡರ್ಸ್ ಇಲ್ಲಿಂದ ಹೋಗಿದೆ. ಇದರ ಬಗ್ಗೆ ನೀವು ಪೆಚ್ಚಿನ ಇಂಟರೆಸ್ಟ್ ತೆಗೆದುಕೊಂಡಿರುವಂತೆ ಕಾಣುತ್ತಿದೆ. 8-5-91ರಲ್ಲಿ ಸರ್ಕಾರದವರು ಸಿ.ಎಸ್.ಗೆ ಪತ್ರ ಬರೆದು ಅಮೌಂಟ್ ಏನು ಇದೆ ಅದು ಕಾನೂನು ಬಾಹಿರವಾಗಿದೆ. ಇದನ್ನು ರಿಕವರಿ ಮಾಡಬೇಕೆಂದು ಬರೆದಿದ್ದಾರೆ. ಇಲ್ಲಿಂದ 25-5-91 ಮತ್ತು 15-7-91ರಲ್ಲಿ ಟೆಲೆಕ್ಸ್ ಕಳುಹಿಸಿದ್ದಾರೆ. ಡೆಪ್ಯೂಟಿ ಸೆಕ್ರೆಟರಿಯನ್ನು ರೆಕವರಿ ಆಫೀಸರ್ ಎಂದು ನೇಮಕ ಮಾಡಲಾಗಿದೆ. ಮತ್ತೆ 20-9-91ರಲ್ಲಿ ಕೇಳಿದಾಗ ಚೀಫ್ ಸೆಕ್ರೆಟರಿ ಒಂದು ತಿಂಗಳಲ್ಲಿ ರಿಕವರಿ ಮಾಡುತ್ತೇನೆ ಎಂದು ಹೇಳಿದ್ದರು.

<u>ವಿಷಯ : ಮಂಗಳೂರು ಜನತಾ ಬಜಾರ್ ಆಡಳಿತ ಮಂಡಲಿ ಬಗ್ಗೆ ತನಿಖೆ.</u>

1068

ಶ್ರೀ ವಿಜಯಕುಮಾರ್ ಶೆಟ್ಟಿ (ಸುರತ್ಕಲ್) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರು ಜನತಾ ಬಜಾರ್ ಆಡಳಿತ ಮಂಡಲಿಯವರು ಸಹಕಾರ ಕಾಯ್ದೆಯನ್ನು ಉಲ್ಲಂಘನೆ ಮಾಡಿ ಅಧಿಕಾರದಲ್ಲಿ ಮುಂದುವರಿದ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಆಡಳಿತ ಮಂಡಲಿಯ ಚುನಾವಣಾ ಕಾಲಕ್ಕೆ ಅನರ್ಹ ಸಹಕಾರ ಸಂಘಗಳಿಗೆ ಮತದಾನದ ಅವಕಾಶ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಈ ಕಾನೂನು ಬಾಹಿರವಾದ ಚಟುವಟಿಕೆಗಳಲ್ಲಿ ತೊಡಗಿರುವ ಈ ಸಂಘದ ವ್ಯವಹಾರಗಳ ಕುರಿತು ಸರ್ಕಾರ ಇಲಾಖಾ ತನಿಖೆ ನಡೆಸಲು ಸಿದ್ಧವಿದೆಯೇ?